**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.1023/2025**

| | | |
|---|---|---|
| ಸಾಕ್ಷಿದಾರರ ಹೆಸರು | : ಸುನಿಲ್ | ಪ್ರಾಸಾ-4 |
| ತಂದೆಯ ಹೆಸರು | : ರುಕ್ಮಯ್ಯ | ಚಾಸಾ-5 |
| ವಯಸ್ಸು | : 32 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 03.02.2026. |
| ವಾಸಸ್ಥಳ | : ಬಾನಹಳ್ಳಿ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಚಾಸಾ-6 ರವರ ಪರಿಚಯ ನನಗಿದೆ. ಚಾಸಾ-10 ರವರ ಪರಿಚಯ ನನಗಿಲ್ಲ.

ಸಾಕ್ಷಿಯು ದಿ.21.03.2025 ರಂದು ಪೋಲಿಸರು ನೀಡಿದ ನೋಟೀಸನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ದಿ.21.03.2025 ರಂದು ಜರುಗಿಸಿದ ಮಹಜರ್ ಮತ್ತು ಅದರಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ನ್ನು ನಿಪಿ-6 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

ದಿ.21.03.2025 ರಂದು ನಿಪಿ-6 ಕ್ಕೆ ಸಹಿಯನ್ನು ಬಣಕಲ್ ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ. ಠಾಣೆಯ ಬಳಿ ಟೀ ಕುಡಿಯುವಾಗ ಪೋಲಿಸರು ಚಾಸಾ-10 ರವರೊಟ್ಟಿಗೆ ಸ್ಥಳಕ್ಕೆ ಬಂದಿರುತ್ತಾರೆ. ನಂತರ ಪೋಲಿಸರು ನನ್ನನ್ನು ಮತ್ತು ಚಾಸಾ-6 ರವರನ್ನು ಠಾಣೆಗೆ ಕರೆದುಕೊಂಡು ಹೋಗಿ ಚಾಸಾ-2 ರವರು ಮರದಿಂದ ಬಿದ್ದು ಪೆಟ್ಟಾಗಿರುತ್ತದೆ ಎಂದು ತಿಳಿಸಿ, ಒಂದು ಬಿದುರಿನ ಗಳವನ್ನು ನಮ್ಮ ಸಮಕ್ಷಮ ಫೋಟೋವನ್ನು ತೆಗೆದು ವಶಕ್ಕೆ ಪಡೆದುಕೊಂಡಿರುತ್ತಾರೆ ಆಗ ಸಮಯ 5.00 ರಿಂದ 5.30 ಆಗಿರುತ್ತದೆ. ಸದರಿ ಸಮಯದಲ್ಲಿ ನಾನು, ಚಾಸಾ-6 ಮತ್ತು 10 ರವರು ಹಾಜರಿರುತ್ತೇವೆ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ಕಾಣುತ್ತಿರುವ ಬಿದುರಿನ ಗಳವನ್ನೇ ಆ ದಿನ ಪೋಲಿಸರು ನಮ್ಮ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ ಎಂದು ತಿಳಿಸಿದ ಮೇರೆಗೆ ಸದರಿ ಫೋಟೋವನ್ನು ನಿಪಿ-7 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ಶ್ರೀ ಡಿ.ಎಸ್. ವಕೀಲರಿಂದಃ**

ನಾನು ಈ ದಿನ ನ್ಯಾಯಾಲಯದ ಮುಂದೆ ಪೋಲಿಸರು ವಶಪಡಿಸಿಕೊಂಡ ಬಿದುರಿನ ಗಳವನ್ನು ನೋಡಿರುವುದಿಲ್ಲ. ಬಣಕಲ್ ಪೋಲಿಸ್ ಠಾಣೆಯ ಬಳಿ ಟೀ ಅಂಗಡಿ ಇಲ್ಲ ಎಂದರೆ ಸರಿಯಲ್ಲ. ಬಾನಹಳ್ಳಿಯಿಂದ ಬಣಕಲ್ ಗೆ 4 ಕೀ.ಮೀ. ಅಂತರವಿದೆ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಿ.21.03.2025 ವಾರದ ಶುಕ್ರವಾರ ಆಗಿರುತ್ತದೆ. ನಾವು ಕೆಲಸ ಸಿಕ್ಕಿದ ಕಡೆ ತೋಟದ ಕೆಲಸಕ್ಕೆ ಹೋಗುತ್ತೇವೆ. ಕೆಲಸ ಎಂದರೆ ಮರಗಸಿ ಕೆಲಸ ಮತ್ತು ಅಡಿಕೆ ಕುಯ್ಲು ಮಾಡುತ್ತೇವೆ. ಚಾಸಾ-1, 2 ಮತ್ತು 10 ರವರ ಪರಿಚಯ ನನಗಿರುವುದಿಲ್ಲ. ಚಾಸಾ-1

ಮತ್ತು 2 ರವರು ಚಾಸಾ-10 ರವರ ತಂದೆ ತಾಯಿ ಎನ್ನುವ ಮಾಹಿತಿ ನನಗಿರುವುದಿಲ್ಲ. ನಾನು ಬಣಕಲ್ ಠಾಣೆಗೆ ಸ್ನೇಹಿತನ ಕಾರಿನಲ್ಲಿ ಹೋಗಿರುತ್ತೇನೆ. ಚಾಸಾ-6 ಮತ್ತು 10 ರವರು ನನ್ನೊಟ್ಟಿಗೆ ನಿಪಿ-6 ಕ್ಕೆ ಸಹಿ ಮಾಡಿರುತ್ತೇನೆ. ಅವರನ್ನು ಹೊರತುಪಡಿಸಿ ಇತರರು ಯಾರೂ ಸಹಿ ಮಾಡಿರುವುದಿಲ್ಲ. ನಿಪಿ-6 ರಲ್ಲಿ ಮೂರು ಜನ ವ್ಯಕ್ತಿಗಳು ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ-7 ರಲ್ಲಿ ಪೋಲಿಸರು ವಶಪಡಿಸಿಕೊಂಡ ಗಳದ ಸಂಪೂರ್ಣ ಚಿತ್ರಣ ಕಾಣುತ್ತಿಲ್ಲ ಎಂದರೆ ಸರಿ. ಸದರಿ ಫೋಟೋದಲ್ಲಿ ಗಳವನ್ನು ಅಳತೆ ಮಾಡಲು ಉಪಯೋಗಿಸುವ ವಸ್ತುಗಳು ಕಂಡುಬರುತ್ತಿಲ್ಲ ಎಂದರೆ ಸಾಕ್ಷಿಯು ಫೋಟೋವನ್ನು ತೆಗೆಯುವ ಮೊದಲೇ ಅಳತೆಯನ್ನು ಮಾಡಲಾಗಿತ್ತು ಎಂದು ನುಡಿಯುತ್ತಾರೆ.

ಸದರಿ ಟೇಪು 30 ರಿಂದ 35 ಅಡಿ ಅಳತೆಯದ್ದಾಗಿರುತ್ತದೆ. ನಿಪಿ-6 ನ್ನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ಮಹಜರ್ ನಲ್ಲಿ ಗಳವನ್ನು ಅಳತೆ ಮಾಡಿರುವ ಬಗ್ಗೆ ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-6 ಅಲ್ಲಿ ಅಂದಾಜಿನ ಮೇರೆಗೆ ಅಳತೆಯನ್ನು ಬರೆಯಲಾಗಿದೆ ಎಂದರೆ ಸರಿ. ನಾನು ಠಾಣೆಗೆ ಹಾಜರಾಗುವ ಪೂರ್ವದಲ್ಲಿಯೇ ಗಳವನ್ನು ಪೋಲಿಸರು ಠಾಣೆಗೆ ತಂದಿದ್ದರು. ಪೋಲಿಸರು ಸದರಿ ಸಮಯದಲ್ಲಿ ಗಳದ ಬಗ್ಗೆ ಮಾಹಿತಿಯನ್ನು ತಿಳಿಸಿರುವುದಿಲ್ಲ. ಚಾಸಾ-6 ರವರು ನನ್ನೊಟ್ಟಿಗೆ ನಿಪಿ-6 ಕ್ಕೆ ಸಹಿ ಮಾಡಿರುತ್ತಾರೆ. ನಿಪಿ-6 ರಲ್ಲಿ ಚಾಸಾ-6 ರವರ ಹೆಸರನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಚಾಸಾ-10 ರವರು ಸಹಿಯು ನಿಪಿ-6 ರಲ್ಲಿ ಇರುತ್ತದೆ. ಚಾಸಾ-2 ರವರ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಮತ್ತು ಅವರ ಸಹಿ ನಿಪಿ-6 ರಲ್ಲಿ ಇರುವುದಿಲ್ಲ. ನಿಪಿ-7 ರಲ್ಲಿ ಯಾವುದೇ ದಿನಾಂಕ ಮತ್ತು ಸಮಯ ಕಂಡುಬರುತ್ತಿಲ್ಲ ಎಂದರೆ ಸರಿ. ನಿಪಿ-7 ರಲ್ಲಿ ಚಾಸಾ-2 ರವರು ಇರುವುದಿಲ್ಲ ಎಂದರೆ ಸರಿ. ಚಾಸಾ-2 ರವರು ನಿಪಿ-7 ರಲ್ಲಿ ಉಪಸ್ಥಿತರಿಲ್ಲದ ಕಾರಣ ಆ ದಿನ ಚಾಸಾ-2 ರವರಿಂದ ಪೋಲಿಸರು ನಮ್ಮ ಸಮಕ್ಷಮ ಯಾವುದೇ ವಸ್ತುವನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ನಿಪಿ-7 ನ್ನು ಠಾಣೆಯಲ್ಲಿಯೇ ತೆಗೆಯಲಾಗಿದೆ ಎಂದು ನುಡಿಯುತ್ತಾರೆ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಮತ್ತು ಆ ದಿನ ನಾನು ಠಾಣೆಗೆ ಹಾಜರಾಗಿ ನನ್ನ ಸಮಕ್ಷಮ ಪೋಲಿಸರು ಯಾವುದೇ ವಸ್ತುವನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಚಾಸಾ-10 ರವರು ನನ್ನ ಸ್ನೇಹಿತರಾದ ಕಾರಣ ಮತ್ತು ಚಾಸಾ-2 ರವರು ಚಾಸಾ-10 ರವರ ಮಗನಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ಅಪರಾಧ ಸಂಖ್ಯೆಯನ್ನು ತಿದ್ದುಪಡಿ ಮಾಡಲಾಗಿರುತ್ತದೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ  ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್  ನ್ಯಾಯಾಧೀಶರು
ಮತ್ತು ಪ್ರದನ್ಯಾದಂ**.,** ಮೂಡಿಗೆರೆ.